**<u>ಸಾಕ್ಷಿ ಗೆ ದಿನಾಂಕ 24-01-2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಂ.ವ್ಹಿ.ಎಲ್. ವಕೀಲರಿಂದ</u>**

ನಿಶಾನೆ ಡಿ-1ನ್ನು ನಾನು ತಹಸೀಲ್ದಾರ ಕಛೇರಿಯಿಂದ ಪಡೆದುಕೊಂಡು ತಂದಿರುತ್ತೇನೆ. 1997ನೇ ಇಸ್ವಿಯಿಂದ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ನಮೂದಾಗಿದ್ದು, 1997ನೇ ಇಸ್ವಿಗಿಂತ ಹಿಂದಿನ ವರ್ಷಗಳಲ್ಲಿ ಪಹಣಿಯಲ್ಲಿ ನಮ್ಮ ಹೆಸರು ಇಲ್ಲದೇ ಇರುವುದರಿಂದ ನಾನು 1997ನೇ ಇಸ್ವಿಗಿಂತ ಹಿಂದಿನ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಸರ್ವೆ ನಂ. 195/3ರ ಆಸ್ತಿಯು ನಮ್ಮ ಹೆಸರಿಗೆ ಪಹಣಿ ಆಗುವುದಕ್ಕಿಂತ ಮುಂಚೆ ನನ್ನ ಅಜ್ಜ ನಾಗರೆಡ್ಡಿ ಇವರ ಹೆಸರಿನಲ್ಲಿತ್ತು. ನನ್ನ ಅಜ್ಜ ನಾಗರೆಡ್ಡಿ ಇವರ ಹೆಸರಿನಲ್ಲಿ ಇರುವ ಪಹಣಿ ಪತ್ರಿಕೆಗಳು ನಮಗೆ ಸಿಗದೇ ಇರುವ ಕಾರಣ, ನಾನು ನ್ಯಾಯಾಲಯಕ್ಕೆ ಅವುಗಳನ್ನು ಹಾಜರುಪಡಿಸಿರುವುದಿಲ್ಲ.

ಸರ್ವೆ ನಂ. 195/1ರ ಒಟ್ಟು 10-00 ಎಕರೆ ಜಮೀನು ಶಿವರೆಡ್ಡಿ ತಂದೆ ನಾಗರೆಡ್ಡಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರ ಹೆಸರಿನಲ್ಲಿ 6 ಎಕರೆ 15 ಗುಂಟೆ ಅವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನಿಶಾನೆ ಪಿ-2 ರಲ್ಲಿ ಸರ್ವೆ ನಂ. 195/1ರ ಜಮೀನು 10 ಎಕರೆ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ಜಮೀನು 6 ಎಕರೆ 15 ಗುಂಟೆ ಇದ್ದು, ಗ್ರಾಮ ಲೇಖಪಾಲಕರು ಹೆಚ್ಚುವರಿ ಜಮೀನನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಶಾನೆ ಪಿ-32ರ ಪ್ರಕಾರ 5 ಎಕರೆ 01 ಗುಂಟೆ ಜಮೀನು ಮೈಸೂರು ಭೂದಾನ ಯಜ್ಞ ಬೋರ್ಡ ನವರ ಹೆಸರಿಗೆ ಪಹಣಿ ಆಗಿತ್ತು ಎಂದರೆ ಸರಿ.

ಖಾಸರಾ ಪಹಣಿಯಿಂದ ಹಿಡಿದು 1997-98ರ ವರೆಗೂ ಸರ್ವೆ ನಂ. 195/1 ಮತ್ತು 195/2ರಂತೆ ಪಹಣಿ ಪತ್ರಿಕೆಗಳು ಇದ್ದವು ಎಂದರೆ ಸರಿ. 1997-98ನೇ ಇಸ್ವಿಯಲ್ಲಿ ಸರ್ವೆ ನಂ. 195/3 ಪಹಣಿ ಪತ್ರಿಕೆಯನ್ನು ನಾನು ಗ್ರಾಮ ಲೇಖಪಾಲಕರ ಜೊತೆ ಸೇರಿ ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-23ರ ಪ್ರಕಾರ ಸರ್ವೆ ನಂ. 195 ರಲ್ಲಿ ಎರಡು ಹಿಸ್ಸೆಗಳು ಮಾತ್ರ ಇದ್ದವು ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನನ್ನ ಹೆಸರಿಗೆ ಪಹಣಿ ಪತ್ರಿಕೆ ಬಂದಾಗಿನಿಂದ ಮೂರು ಹಿಸ್ಸೆಗಳಾಗಿ ಮಾರ್ಪಾಡು ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸರ್ವೆ ನಂ. 195ರ ಜಮೀನು ಮೂರು ಹಿಸ್ಸೆಗಳಾಗಿ ಮಾರ್ಪಾಡಾಗಿದ್ದರ ಬಗ್ಗೆ ಹಿಸ್ಸಾ ನಕಾಶೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ನ್ಯಾಯಾಲಯಕ್ಕೆ

ಆಕಾರಬಂಧ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ. ಸರ್ವೆ ನಂ. 195/1ರ 10 ಎಕರೆ ಜಮೀನಿನಲ್ಲಿ 4 ಎಕರೆ 36 ಗುಂಟೆ ಜಮೀನನ್ನು ಸರಕಾರವು ವಾದಿಯ ತಂದೆಯ ಕಡೆಯಿಂದ ಪಡೆದುಕೊಂಡಿತ್ತು ಎಂದರೆ ಸರಿ. ಸದರಿ 4 ಎಕರೆ 36 ಗುಂಟೆ ಜಮೀನನ್ನು ಸರಕಾರದವರು ಮಾಣಿಕ ತಂದೆ ಮಲ್ಲಪ್ಪ ಹರಿಜನ ಇವರಿಗೆ ನೀಡಿತ್ತು ಎಂದರೆ ಸರಿ.

ಸರ್ವೆ ನಂ. 195/1ರ ಜಮೀನು ಪೂರ್ವದ ಕಡೆ ಮಾಣಿಕ ತಂದೆ ಮಲ್ಲಪ್ಪ ಹರಿಜನ ಇವರ ಜಮೀನು ಇರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ. 195/1ರ ಪಶ್ಚಿಮ ದಿಕ್ಕಿನಲ್ಲಿ ವಾದಿಯ ಉಳಿದ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂ. 195/1ರ ವಾದಿಯ ಉಳಿದ ಜಮೀನು ಆದ ನಂತರ ಸರ್ವೆ ನಂ. 196ರ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.195/1ರ ಜಮೀನಿನಲ್ಲಿ 4 ಎಕರೆ 36 ಗುಂಟೆ ಜಮೀನಿನಲ್ಲಿ ಮಾಣಿಕ ತಂದೆ ಮಲ್ಲಪ್ಪ ಹರಿಜನ ಈತನು ಕಬ್ಜಾದಲ್ಲಿದ್ದು, ಇನ್ನೂಳಿದ 5 ಎಕರೆ 04 ಗುಂಟೆ ಜಮೀನಿನಲ್ಲಿ ವಾದಿಯು ಕಬ್ಜೆಯನ್ನು ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ವಾದಿಯು 1 ಎಕರೆ 20 ಗುಂಟೆ ಜಮೀನಿನ ಕಬ್ಜೆ ಹೊಂದಿರುತ್ತಾನೆ ಎಂದು ನುಡಿಯುತ್ತಾರೆ.

ಸರ್ವೆ ನಂ. 195/3ರ ಜಮೀನು ಸದರಿ ಸರ್ವೆ ನಂಬರಿನ ಪೂರ್ವ ದಿಕ್ಕಿಗೆ ಇರುತ್ತದೆ. ಸರ್ವೆ ನಂ. 195/2ರ ಮೈಸೂರು ಭೂದಾನ ಯಜ್ಞ ಬೋರ್ಡನ ಜಮೀನು ಸರ್ವೆ ನಂಬರ 195/1ರ ದಕ್ಷಿಣ ದಿಕ್ಕಿಗೆ ಇರುತ್ತದೆ. ಮೈಸೂರ ಭೂದಾನ ಯಜ್ಞ ಬೋರ್ಡನ ಜಮೀನು ಸರ್ವೆ ನಂ. 195/1ರ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಸ್ಸಾ ಟಿಪ್ಪಣಿ ಪ್ರಕಾರ ಮೈಸೂರ ಭೂದಾನ ಯಜ್ಞ ಬೋರ್ಡನ ಜಮೀನು ಸರ್ವೆ ನಂ. 195/1ರ ಪೂರ್ವಕ್ಕೆ ಇರುತ್ತದೆ ಎಂದರೆ ಸರಿಯಲ್ಲ.

ಸರ್ವೆ ನಂ. 195/1 ರ ಪಶ್ಚಿಮ ದಿಕ್ಕಿನಲ್ಲಿರುವ ಸರ್ವೆ ನಂ. 195/2ರ 05 ಎಕರೆ 01 ಗುಂಟೆ ಜಮೀನಿನಲ್ಲಿ ನಾನು ಸುಮಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೈಸೂರು ಭೂದಾನ ಯಜ್ಞ ಬೋರ್ಡನ ಜಮೀನಿನ 5 ಎಕರೆ 01 ಗುಂಟೆ ಜಮೀನಿನ ಪೈಕಿ 4-00 ಎಕರೆ ಜಮೀನನ್ನು 2ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾಳೆ ಎಂದರೆ ಸರಿ. ಸದರಿ ಮೈಸೂರು ಭೂದಾನ ಯಜ್ಞ ಬೋರ್ಡನ 5 ಎಕರೆ 01 ಗುಂಟೆ ಜಮೀನಿನ 4 ಎಕರೆ

ಜಮೀನಿನಲ್ಲಿ 2ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದು, ಇನ್ನೂಳಿದ 1 ಎಕರೆ 01 ಗುಂಟೆ ಜಮೀನು ಸರಕಾರಿ ಜಮೀನಾಗಿದ್ದು, ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸರ್ವೆ ನಂ. 195ರ ಜಮೀನಿನಲ್ಲಿ ಸರ್ವೆ ನಂ. 195/3 ರಂತೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನ ಪಹಣಿಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 2ನೇ ಪ್ರತಿವಾದಿ ಕೂಡಿ ಸರ್ವೆ ನಂ. 195/3ರ ಪಹಣಿಯನ್ನು ಸೃಷ್ಟಿಸಿಕೊಂಡು ವಾದಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೊದಲು ವಾದಿಯ ಹಿರಿಯ ಆಸ್ತಿ ಇದ್ದು, ಮೊದಲು ಆತನ ತಂದೆಯ ಹೆಸರಿನಲ್ಲಿದ್ದು, ಈಗ ಆತನ ಹೆಸರಿನಲ್ಲಿದ್ದು, ಆತನೇ ಸದರಿ ದಾವಾ ಆಸ್ತಿಯ ಕಬ್ಜೆಯನ್ನು ಹೊಂದಿರುತ್ತಾನೆ ಎಂದರೆ ಸರಿಯಲ್ಲ. ರಾಜಾಪೂರದಲ್ಲಿರುವ ಸರ್ವೆ ನಂ. 195ಕ್ಕೂ ಮತ್ತು ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆಸು ಸುಮಾರು 30 ವರ್ಷಗಳಿಂದ ನಾನು 195/3ರಲ್ಲಿ ಉಳುಮೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸರ್ವೆ ನಂ. 195/3ರ ಜಮೀನಿನಲ್ಲಿ ನಾನು ಕಬ್ಜೆಯಲ್ಲಿದ್ದು, ನಾನೇ ಸದರಿ ಸರ್ವೆ ನಂಬರನ್ನು ಉಳುಮೆ ಮಾಡುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.